# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 456 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್ ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22-12-2022 |
| ಉತ್ತರಿಸುವವರು | : | ಸನ್ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಕಾಡಾನೆ ಮತ್ತು ಕಾಡುಪ್ರಾಣಿಗಳ ಹಾವಳಿಯಿಂದ ಮೃತಪಟ್ಟಿರುವವರ ಸಂಖ್ಯೆ ಎಷ್ಟು; ಈ ಹಾವಳಿಯಿಂದ ಗಾಯಗೊಂಡಿರುವವರ ಸಂಖ್ಯೆ ಎಷ್ಟು; (ಎರಡು ಜಿಲ್ಲೆಗಳ ಪ್ರತಿಯೊಬ್ಬರ ಹೆಸರು ವಿಳಾಸದೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು) | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ/ಗಾಯಗೊಂಡಿರುವ ಪ್ರಕರಣಗಳ ವಿವರ:- (ಕೆಳಗಿನ ಕೋಷ್ಟಕ) |
| ಆ) | ಕಾಡು ಪ್ರಾಣಿಗಳಿಂದ ಮತ್ತು ಆನೆಗಳ ಹಾವಳಿಗೆ ಒಳಗಾಗಿ ಮೃತಪಟ್ಟ ಸಾರ್ವಜನಿಕರಿಗೆ ಕಳೆದ ಎರಡು ವರ್ಷದಲ್ಲಿ ನೀಡಿರುವ ಪರಿಹಾರದ ಮೊತ್ತವೆಷ್ಟು; (ಪರಿಹಾರ ನೀಡಿದವರ ಸಂಪೂರ್ಣ ಮಾಹಿತಿ ನೀಡುವುದು) | ಮಾನವ ಪ್ರಾಣಹಾನಿ ಮತ್ತು ಗಾಯಗೊಂಡ ಪ್ರಕರಣಗಳಿಗೆ ಪಾವತಿಸಲಾದ ಪರಿಹಾರ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br><br>ಪರಿಹಾರ ನೀಡಲು ಯಾವುದೇ ಬಾಕಿ ಪ್ರಕರಣಗಳು ಇರುವುದಿಲ್ಲ. |
| ಇ) | ಪರಿಹಾರ ನೀಡಲು ಬಾಕಿ ಇರುವವರ ಸಂಖ್ಯೆ ಎಷ್ಟು; ಕಾಡುಪ್ರಾಣಿಗಳಿಂದ ಗಾಯಗೊಂಡವರಿಗೆ ನೀಡಿರುವ ಪರಿಹಾರದ ಮೊತ್ತವೆಷ್ಟು; ಯಾವ ಮಾನದಂಡವನ್ನು ಅನುಸರಿಸಿ ಪರಿಹಾರ ನೀಡಲಾಗಿದೆಯೇ; (ಸಂಪೂರ್ಣ ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಅಪಜೀ-128-ಎಫ್ ಡಬ್ಲ್ಯೂಎಲ್-2013, ದಿನಾಂಕ: 15-09-2015ರ ಪ್ರಕಾರ ಕಾಡುಪ್ರಾಣಿಗಳ ದಾಳಿಯಿಂದ ಗಾಯಗೊಂಡ ಪ್ರಕರಣದಲ್ಲಿ ಸಂತ್ರಸ್ಥರಿಗೆ ದಯಾತ್ಮದ ಧನದ ಜೊತೆಗೆ ವೈದ್ಯಕೀಯ ವೆಚ್ಚವನ್ನು ಸಿಜಿಹೆಚ್ ಎಸ್. ದರಗಳಿಗೆ ಮಿತಿಗೊಳಿಸಿ ಪಾವತಿಸಲು ಆದೇಶವಿರುತ್ತದೆ. |
| ಈ) | ಮಾನವೀಯತೆಯ ಹಿತದೃಷ್ಟಿಯಿಂದ ಸರ್ಕಾರದ ಮಾನದಂಡವನ್ನು ಬಿಟ್ಟು ಕಾಡಿನಂಚಿನ ಗ್ರಾಮದಲ್ಲಿ ವಾಸ ಮಾಡುವ ಬಡರೈತರಿಗೆ ಇಂತಹ ಅವಘಡಗಳು ನಡೆದಾಗ ಹೆಚ್ಚಿನ ರೀತಿಯಲ್ಲಿ ಪರಿಹಾರ ನೀಡಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳಾವುವು; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಅಪಜೀ-128-ಎಫ್‌ಡಬ್ಲ್ಯೂಎಲ್-2013, ದಿನಾಂಕ: 15-09-2015ರ ಪ್ರಕಾರ ಕಾಡುಪ್ರಾಣಿಗಳ ದಾಳಿಯಿಂದ ಗಾಯಗೊಂಡ ಪ್ರಕರಣದಲ್ಲಿ ಸಂತ್ರಸ್ಥರಿಗೆ ದಯಾತ್ಮದ ಧನದ ಜೊತೆಗೆ ವೈದ್ಯಕೀಯ ವೆಚ್ಚವನ್ನು ಸಿಜಿಹೆಚ್ ಎಸ್. ದರಗಳಿಗೆ ಮಿತಿಗೊಳಿಸಿ ಪಾವತಿಸಲು ಆದೇಶವಿರುತ್ತದೆ.<br><br>ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಶಾಶ್ವತ ಅಂಗವಿಕಲತೆ, ಗಾಯಗೊಂಡವರಿಗೆ, ಆಸ್ತಿ ಪಾಸ್ತಿ ನಷ್ಟ ಪ್ರಕರಣಗಳಿಗೆ ಈ ಹಿಂದೆ ನೀಡಲಾಗುತ್ತಿದ್ದ ದರವನ್ನು ಸರ್ಕಾರದ ಆದೇಶ ಸಂಖ್ಯೆ: ಅಪಜೀ -114 - ಎಫ್‌ಡಬ್ಲ್ಯೂಎಲ್ - 2022 ದಿನಾಂಕ:15-12-2022 ಮತ್ತು ತಿದ್ದುಪಡಿ ಆದೇಶ ದಿನಾಂಕ: 16-12-2022 ರನ್ವಯ ಪರಿಷ್ಕರಿಸಿ ಹೆಚ್ಚಿಸಲಾಗಿದೆ. ಸರ್ಕಾರದ ಆದೇಶದ ಪ್ರತಿಯನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ. |

| ಜಿಲ್ಲೆ | 2020-21 | | 2021-22 | |
|---|---|---|---|---|
| | ಮಾನವ ಪ್ರಾಣಹಾನಿ ಪ್ರಕರಣ | ಗಾಯ ಗೊಂಡ ಪ್ರಕರಣ | ಮಾನವ ಪ್ರಾಣಹಾನಿ ಪ್ರಕರಣ | ಗಾಯಗೊಂಡ ಪ್ರಕರಣ |
| ಮೈಸೂರು | 3 | 3 | - | 3 |
| ಚಾಮರಾಜನಗರ | 3 | 10 | 2 | 10 |

ಚಾಮರಾಜನಗರ ಜಿಲ್ಲೆ:

(ಮೊತ್ತ ರೂ.ಗಳಲ್ಲಿ)

| ವರ್ಷ | ಮೃತಪಟ್ಟ ವ್ಯಕ್ತಿ ಹಾಗೂ ವಾರಸುದಾರರ ವಿವರ | ಪಾವತಿಸಲಾದ ಮೊತ್ತ | ಗಾಯಗೊಂಡವರ ವಿವರ (ಶ್ರೀ/ಶ್ರೀಮತಿ) | ಪಾವತಿಸಲಾದ ಮೊತ್ತ |
|---|---|---|---|---|
| 2020-21 | ಗುರುಸ್ವಾಮಿ ಬಿನ್ ಹನುಮಯ್ಯ ಹಾಗೂ ವಾರಸುದಾರ ಶ್ರೀಮತಿ ರತ್ನಮ್ಮ, ಹೊಂಗಲವಾಡಿ ಗ್ರಾಮ. | 7,50,000.00 | ಶಂಭುಲಿಂಗಪ್ಪ ಬಿನ್ ಗುರುಲಿಂಗಪ್ಪ, ವೀರನಪುರ ಗ್ರಾಮ, ಹರವೆ ಹೋಬಳಿ ಚಾಮರಾಜನಗರ ತಾಲ್ಲೂಕು. | 30,000.00 |
| | ಸ್ವಾಮಿ ಬಿನ್ ಬೆಳ್ಳೇಗೌಡ ಹಾಗೂ ವಾರಸುದಾರ ಶ್ರೀಮತಿ ನಾಗಮ್ಮ, ಹೆಣಗುಂಬ ಗ್ರಾಮ, ಹರದನಹಳ್ಳಿ ಹೋಬಳಿ. | 7,50,000.00 | ಗಣೇಶ ಬಿನ್ ಶಿವಪ್ಪ, ವೀರನಪುರ ಗ್ರಾಮ, ಹರವೆ ಹೋಬಳಿ, ಚಾಮರಾಜನಗರ ತಾಲ್ಲೂಕು. | 30,000.00 |
| | ಚೆನ್ನೇಗೌಡ ಬಿನ್ ಬಸವೇಗೌಡ ಹಾಗೂ ವಾರಸುದಾರ ಶ್ರೀಮತಿ ನಿಂಗಜಮ್ಮ, ಯರಂಬಾಡಿ ಗ್ರಾಮ, ಹೂಗ್ಯಂ. | 7,50,000.00 | ಸಿದ್ದರಾಜು ಬಿನ್ ಬೈರಗೌಡ, ಹಳೇಪುರ ಗ್ರಾಮ, ಹರವೆ ಹೋಬಳಿ, ಚಾಮರಾಜನಗರ ತಾಲ್ಲೂಕು. | 30,000.00 |
| | | | ರಾಚನಾಯಕ ಬಿನ್ ನಿಂಗನಾಯಕ, ಅರಕಲವಾಡಿ ಗ್ರಾಮ, ಹರದನಹಳ್ಳಿ ಹೋಬಳಿ, ಚಾಮರಾಜನಗರ ತಾಲ್ಲೂಕು. | 5,000.00 |
| | | | ಮಹದೇವಪ್ಪ ಬಿನ್ ಚನ್ನಬಸಪ್ಪ, ಅರಕಲವಾಡಿ ಗ್ರಾಮ, ಹರದನಹಳ್ಳಿ ಹೋಬಳಿ, ಚಾಮರಾಜನಗರ ತಾಲ್ಲೂಕು. | 30,000.00 |
| | | | ಸರ್ವಣಮ್ಮ (ರತ್ನಮ್ಮ) ಕೋಂ ಗುರುಪಾದಪ್ಪ, ನರಸಮಂಗಲ ಗ್ರಾಮ, ಹರದನಹಳ್ಳಿ ಹೋಬಳಿ, ಚಾಮರಾಜನಗರ ತಾಲ್ಲೂಕು | 30,000.00 |
| | | | ಮಹದೇವೇಗೌಡ ಬಿನ್ ಮರಿಗೌಡ, ಬಾಗಳಿ ಗ್ರಾಮ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ ತಾಲ್ಲೂಕು. | 6,000.00 |
| | | | ರಂಗಸ್ವಾಮಿ ನಾಯಕ ಬಿನ್ ಪುಟ್ಟರಂಗನಾಯಕ, ಯಾನಗಳ್ಳಿ ಗ್ರಾಮ, ಹರದನಹಳ್ಳಿ ಹೋಬಳಿ ಚಾಮರಾಜನಗರ ತಾಲ್ಲೂಕು. | 5,000.00 |
| | | | ಸಿದ್ದೇಗೌಡ, ಎರನಕಟ್ಟೆ ಪೋಡು (ಪುರಾಣಿಪೋಡು) ಗ್ರಾಮ, ಬಿಳಿಗಿರಿರಂಗನಬೆಟ್ಟ, ಯಳಂದೂರು ತಾಲ್ಲೂಕು. | 30,000.00 |
| | | | ಚಿನ್ನಪ್ಪಿ ಬಿನ್ ಮಾದಯ್ಯ, ರಾಮೇಗೌಡನಹಳ್ಳಿ, ಹನೂರು ತಾಲ್ಲೂಕು. | 10,671.00 |

| ವರ್ಷ | ಮೃತಪಟ್ಟ ವ್ಯಕ್ತಿ ಹಾಗೂ ವಾರಸುದಾರರ ವಿವರ | ಪಾವತಿಸಲಾದ ಮೊತ್ತ | ಗಾಯಗೊಂಡವರ ವಿವರ (ಶ್ರೀ/ಶ್ರೀಮತಿ) | ಪಾವತಿಸಲಾದ ಮೊತ್ತ |
|---|---|---|---|---|
| 2021-22 | ಚಾಟಿನಿಂಗಯ್ಯ ಹಾಗೂ ವಾರಸುದಾರ ಶ್ರೀಮತಿ ಶಿವಮ್ಮ, ದೊಡ್ಡಮೂಡಹಳ್ಳಿ ಗ್ರಾಮ, ಹರದನಹಳ್ಳಿ ಹೋಬಳಿ. | 7,50,000.00 | ಜಯರಾಮ, ಮುತ್ತಿಗೆ ಗ್ರಾಮ, ಕಸಬಾ ಹೋಬಳಿ, ಚಾಮರಾಜನಗರ ತಾಲ್ಲೂಕು | 30,000.00 |
| | ಪುಟ್ಟಮಾದನಾಯಕ ಹಾಗೂ ವಾರಸುದಾರ ಶ್ರೀಮತಿ ಮಹದೇವಮ್ಮ, ಹುತ್ತೂರು ಗ್ರಾಮ, ಲೊಕ್ಕನಹಳ್ಳಿ ಹೋಬಳಿ | 7,50,000.00 | ಸಿದ್ದರಾಜು, ಕೋಡಿಮೋಳೆ ಗ್ರಾಮ, ಚಂದಕವಾಡಿ ಹೋಬಳಿ, ಚಾಮರಾಜನಗರ ತಾಲ್ಲೂಕು | 15,000.00 |
| | | | ಮಂಗಳಮ್ಮ ಬಿ.ಎಂ, ಉಡಿಗಾಲ ಗ್ರಾಮ, ಹರವೆ ಹೋಬಳಿ, ಚಾಮರಾಜನಗರ ತಾಲ್ಲೂಕು | 10,000.00 |
| | | | ಶಮಹದೇವಪ್ಪ, ಹರವೆ ಗ್ರಾಮ ಮತ್ತು ಹೋಬಳಿ, ಚಾಮರಾಜನಗರ ತಾಲ್ಲೂಕು | 30,000.00 |
| | | | ಪುಟ್ಟೇಗೌಡ ಬಿನ್ ಕರಿಯಪ್ಪಗೌಡ, ಕೊಪ್ಪ ಗ್ರಾಮ, ಹನೂರು ತಾಲ್ಲೂಕು | 30,000.00 |
| | | | ಸರೋಜಮ್ಮ ಕೋಂ ಶಂಕರಪ್ಪ, ಬಸಪ್ಪನದೊಡ್ಡಿ ಗ್ರಾಮ, ಹನೂರು ತಾಲ್ಲೂಕು. | 30,000.00 |
| | | | ಶಿವಲಂಕಾರೇಗೌಡ ಬಿನ್ ಕರಿಗೌಡ, ಮಾಸ್ತಿಗೌಡನ ದೊಡ್ಡಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು | 20,000.00 |
| | | | ಮೂರ್ತಿ ಬಿನ್ ಸಪ್ಪಪ್ಪ, ಹಲಗುಮೂಲೆ ಗ್ರಾಮ, ಹನೂರು ತಾಲ್ಲೂಕು | 30,000.00 |
| | | | ಚೆನ್ನೇಗೌಡ ಬಿನ್ ಮಲ್ಲೇಗೌಡ, ಬೂದುಬಾಳು, ಹನೂರು ತಾಲ್ಲೂಕು | 20,000.00 |
| | | | ಪರಮೇಶ್ ಬಿನ್ ಲೇಟ್ ಮಹದೇವಪ್ಪ, ದಂಟಳ್ಳಿ ಗ್ರಾಮ, ಹನೂರು ತಾಲ್ಲೂಕು | 2,50,000.00 |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ ಬೆಂಗಳೂರು

ಅನುಬಂಧ 2

# ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ ಅರಣ್ಯ ಪ್ರದೇಶದ ಕಾಡಂಚಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ

| ಕ್ರ. ಸಂ | ವರ್ಷ | ಕಾಮಗಾರಿ ವಿವರ | ಕಾಮಗಾರಿ ಸ್ಥಳ | ಮೊತ್ತ (ಲಕ್ಷಗಳಲ್ಲಿ) |
|---|---|---|---|---|
| ಮೈಸೂರು ವಿಭಾಗ | | | | |
| 1 | 2020-1 | ಕಳ್ಳಬೇಟೆ ಶಿಬಿರ ನಿರ್ವಹಣೆ | ಲಂಕೆ, ಕುಪ್ಪದಮಂಟಿ, ಹೆಗ್ಗುಡಿಲು, ಕೊತ್ತೇಗಾಲ, ಪುರದಕಟ್ಟೆ, ರಾಜೂರು, ಮಲ್ಲಹಳ್ಳಿ | 122.00 |
| 2 | | ಆನತಡೆ ಕಂದಕ ನಿರ್ವಹಣೆ | ತಲೆಬುರುಡೆಹಳ್ಳ, ಹೆಗ್ಗುಡಿಲು, ನಾಗೇಗೌಡನ ಜಮೀನು, | |
| 3 | | ಆನೆತಡೆ ಶಿಬಿರ ನಿರ್ವಹಣೆ | ಕೆಲ್ಲೂಪುರ, ಸೊರದಮಂಟಿ, ಮೊರಾರ್ಜಿದೇಸಾಯಿ ಶಾಲೆಯ ಹತ್ತಿರ, ಅಲಸೂರುಗುಡ್ಡ, ಹೂವಿನಕೊಳ | |
| 4 | | ಸೋಲಾರ್ ಬೇಲಿ ನಿರ್ವಹಣೆ | ಹೆಗ್ಗುಡಿಲು, ಮಲ್ಲಯ್ಯನ್ ಜಮೀನು ನಿಯರ್ ಕುಪ್ಪದಮಂಟಿ ಕ್ಯಾಂಪ್ ನಿಂದ ಸುರೇಶ್ ನ ಜಮೀನು | |
| 5 | | ಕೆರೆ ಹೂಳೆತ್ತುವುದು | ಪುರದಕಟ್ಟೆ, ಗುಡ್ಡ, ತೆಂಗಿನೀರು ಹಳ್ಳ | |
| 6 | | ಹೊಸಕೆರೆ ನಿರ್ಮಾಣ | ದೊಡ್ಡನಕಟ್ಟೆ ಹಳ್ಳ | |
| ಹುಣಸೂರು ವಿಭಾಗ | | | | |
| 1 | 2020-21 | ಎ.ಡಿ.ಸಿ. ಕ್ಯಾಂಪ್ | ಹುಣಸೂರು ವಲಯ | 3.000 |
| 2 | | ಆನೆ ತಡೆ ಶಿಬಿರದ ನಿರ್ವಹಣೆ | ಕೆ.ಆರ್.ನಗರ ವಲಯ | 1.890 |
| | | | ಒಟ್ಟು | 4.890 |
| ವನ್ಯಜೀವಿ ವಿಭಾಗ, ಮೈಸೂರು | | | | |
| 1 | 2020-21 | ಕೆರೆಗಳ ಹೂಳೆತ್ತುವುದು | ವನ್ಯಜೀವಿ ವಲಯ ಮೈಸೂರು | 6.00 |
| 2 | | ಬೆಂಕಿ ವಾಚರ್ ಗಳ ನೇಮಕ (01.01.21-ರಿಂದ 31.03.2021) | | 9.806 |
| 3 | | ಬೆಂಕಿ ರಕ್ಷಣಾ ಕಾರ್ಯಕ್ಕಾಗಿ ಒಂದು ವಾಹನವನ್ನು ಬಾಡಿಗೆ ಪಡೆಯುವುದು | | 0.995 |
| 4 | | ಬೆಂಕಿ ರೇಖೆಗಳ ನಿರ್ವಹಣೆ | | 3.169 |
| 5 | | ವನ್ಯಪ್ರಾಣಿ ಹತ್ಯೆ ತಡೆ ಶಿಬಿರ-2 ಕ್ಯಾಂಪ್ | | 17.742 |
| 6 | | ವನ್ಯಪ್ರಾಣಿ ಹತ್ಯೆ ತಡೆ ಶಿಬಿರಕ್ಕೆ ಆಹಾರ ಪದಾರ್ಥಗಳನ್ನು ಪೂರೈಕೆ | | 2.190 |
| 7 | | ಕೆರೆಗಳ ಹೂಳೆತ್ತುವುದು | | 4.350 |
| | | | ಒಟ್ಟು | 47.225 |

| ಕ್ರ. ಸಂ | ವರ್ಷ | ಕಾಮಗಾರಿ ವಿವರ | ಕಾಮಗಾರಿ ಸ್ಥಳ | ಮೊತ್ತ (ಲಕ್ಷಗಳಲ್ಲಿ) |
|---|---|---|---|---|
| ಮೈಸೂರು ವಿಭಾಗ | | | | |
| 1 | 2021-22 | ಕಳ್ಳಬೇಟೆ ಶಿಬಿರ ನಿರ್ವಹಣೆ | ಲಂಕೆ, ಕುಪ್ಪದಮಂಟಿ, ಹೆಗ್ಗುಡಿಲು, ಕೊತ್ತೇಗಾಲ, ಪುರದಕಟ್ಟೆ, ರಾಜೂರು, ಮೆಲ್ಲಹಳ್ಳಿ | 117.140 |
| 2 | | ಸೋಲಾರ್ ಬೇಲಿ ನಿರ್ವಹಣೆ | ಹೆಗ್ಗುಡಿಲು, ಮಲ್ಲಯ್ಯನ್ ಜಮೀನು ನಿಯರ್ ಕುಪ್ಪದಮಂಟಿ ಕ್ಯಾಂಪ್ ನಿಂದ ಸುರೇಶ್ ನ ಜಮೀನು | |
| 3 | | ಆನೆ ತಡೆ ಶಿಬಿರದ ನಿರ್ವಹಣೆ | ಕೆಲ್ಲೂಪುರ, ಸೊರದಮಂಟಿ, ಮೂರಾರ್ಜಿದೇಸಾಯಿ ಶಾಲೆಯ ಹತ್ತಿರ, ಅಲಸೂರುಗುಡ್ಡ, ಹೂವಿನಕೊಳ | |
| 4 | | ಆನತಡೆ ಕಂದಕ ನಿರ್ವಹಣೆ | ಕಬೀರ್ ಜಮೀನಿನಿಂದ ಕೊತ್ತೇಗಾಲ ಎಪಿಸಿ ಕ್ಯಾಂಪ್, ಮಲ್ಲಯ್ಯನ ಜಮೀನು ಪುರದಕಟ್ಟೆ ದಾರಿಯಿಂದ ಕುಪ್ಪದಮಂಟಿ ಎಪಿಸಿ ಕ್ಯಾಂಪ್ | |
| ಹುಣಸೂರು ವಿಭಾಗ | | | | |
| 1 | 2021-22 | ಮುಳ್ಳುತಂತಿ ಬೇಲಿ ನಿರ್ಮಾಣ | ಪಿರಿಯಾಪಟ್ಟಣ ವಲಯ | 11.025 |
| 2 | | ಚಿರತೆ ಬೋನು ಖರೀದಿ ಹಾಗೂ ಇತರೆ | ಹುಣಸೂರು ವಲಯ | 13.975 |
| | | | ಒಟ್ಟು | 142.140 |

## ಚಾಮರಾಜನಗರ ಜಿಲ್ಲೆ ವ್ಯಾಪ್ತಿಯಲ್ಲಿ ಅರಣ್ಯ ಪ್ರದೇಶದ ಕಾಡಂಚಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ

**2020-21** (ಭೌತಿಕ ಕಿ.ಮೀ.ಗಳಲ್ಲಿ / ಆರ್ಥಿಕ ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವಿಭಾಗ | ನಿಗದಿಪಡಿಸಿದ ಗುರಿ | | | | | | ಸಾಧಿಸಿದ ಪ್ರಗತಿ | | | | | |
|---|---|---|---|---|---|---|---|---|---|---|---|---|---|
| | | ಆನೆ ತಡೆ ಕಂದಕ | | ಸೋಲಾರ್ /ಟೆಂಟಕಲ್ ತಂತಿಬೇಲಿ | | ರೈಲ್ವೆ ಬ್ಯಾರಿಕೇಡ್ | | ಆನೆ ತಡೆ ಕಂದಕ | | ಸೋಲಾರ್ /ಟೆಂಟಕಲ್ ತಂತಿಬೇಲಿ | | ರೈಲ್ವೆ ಬ್ಯಾರಿಕೇಡ | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಬಿ.ಆರ್.ಟಿ ಹುಲಿಸಂರಕ್ಷಿತ ಪ್ರದೇಶ | 11.20 | 80.600 | 145.5 | 40.75 | - | - | 11.20 | 80.600 | 145.5 | 40.75 | - | - |
| 2 | ಮಲೈಮಹದೇಶ್ವರ | 4.600 | 69.489 | 10.00 | 50.000 | -- | -- | 4.600 | 69.489 | 10.00 | 50.000 | -- | -- |
| 3 | ಕಾವೇರಿ ವನ್ಯಜೀವಿ | - | - | 9.00 | 44.79 | 19.00 | 2117.38 | - | - | 9.00 | 44.79 | 18.38 | 2117.3 |
| | ಒಟ್ಟು | 15.80 | 150.089 | 164.50 | 135.54 | 19.00 | 2117.38 | 15.80 | 150.089 | 164.50 | 135.54 | 18.38 | 2117.3 |

2021-22 (ಭೌತಿಕ ಕಿ.ಮೀ.ಗಳಲ್ಲಿ / ಆರ್ಥಿಕ ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವಿಭಾಗ | ನಿಗದಿಪಡಿಸಿದ ಗುರಿ | | | | | | ಸಾಧಿಸಿದ ಪ್ರಗತಿ | | | | | |
|---|---|---|---|---|---|---|---|---|---|---|---|---|---|
| | | ಆನೆ ತಡೆ ಕಂದಕ | | ಸೋಲಾರ್ /ಟೆಂಟಕಲ್ ತಂತಿಬೇಲಿ | | ರೈಲ್ವೆ ಬ್ಯಾರಿಕೇಡ್ | | ಆನೆ ತಡೆ ಕಂದಕ | | ಸೋಲಾರ್ /ಟೆಂಟಕಲ್ ತಂತಿಬೇಲಿ | | ರೈಲ್ವೆ ಬ್ಯಾರಿಕೇಡ್ | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಬಿ.ಆರ್.ಟಿ. ಹುಲಿಸಂರಕ್ಷಿತ ಪ್ರದೇಶ | 20.21 | 88.017 | 27.50 | 122.741 | 3.00 | 360.000 | 20.21 | 88.189 | 27.50 | 122.741 | - | 215.215 (ರೈಲ್ವೆ ಹಳಿ ಖರೀದಿ) |
| 2 | ಮಲೆಮಹದೇಶ್ವರ | 3.00 | 28.933 | 16.64 | 91.428 | 8.76 | 1266.429 | 3.00 | 28.933 | 16.64 | 91.428 | 8.76 | 899.96 |
| 3 | ಕಾವೇರಿ ವನ್ಯಜೀವಿ | - | | 82.00 | 235.00 | 4.49 | 553.51 | - | | 82.00 | 235.00 | 2.49 | 440.00 |
| | | **23.21** | **116.95** | **126.14** | **449.169** | **16.25** | **2179.939** | **23.21** | **117.122** | **126.14** | **449.169** | **11.25** | **1361.18** |

(ಸಹಿ)

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ ಬೆಂಗಳೂರು

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಶಾಶ್ವತ ಅಂಗವಿಕಲತೆ, ಗಾಯಗೊಂಡವರಿಗೆ, ಆಸ್ತಿ-ಪಾಸ್ತಿ ನಷ್ಟ ಪ್ರಕರಣಗಳಿಗೆ ಪಾವತಿಸುತ್ತಿರುವ ಪರಿಹಾರ ಧನವನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:**
(1) ಸರ್ಕಾರದ ಆದೇಶ ಸಂಖ್ಯೆ:ಅಪಜೀ-143-ಎಫ್‌ಡಬ್ಲ್ಯೂಎಲ್-2010, ದಿನಾಂಕ: 30/04/2011 ಮತ್ತು 03/08/2011.
(2) ಸರ್ಕಾರದ ಆದೇಶ ಸಂಖ್ಯೆ:ಅಪಜೀ 130 ಎಫ್‌ಡಬ್ಲ್ಯೂಎಲ್ 2016, ದಿನಾಂಕ:19/09/2016.
(3) ಸರ್ಕಾರದ ಆದೇಶ ಸಂಖ್ಯೆ:ಅಪಜೀ 61 ಎಫ್‌ಎಪಿ 2018, ಬೆಂಗಳೂರು, ದಿನಾಂಕ:16/10/2018.
(4) ಸರ್ಕಾರದ ಆದೇಶ ಸಂಖ್ಯೆ:ಅಪಜೀ 66 ಎಫ್‌ಡಬ್ಲ್ಯೂಎಲ್ 2019, ದಿನಾಂಕ:07/01/2020
(5) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ಇವರ ಪತ್ರ ಸಂಖ್ಯೆ:ಪ್ರಮುಅಸಂ(ವಜೀ)/ಸಿ2/ಸಿಆರ್-37/2011-12

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಿಂದ (4) ವರೆಗಿನ ಸರ್ಕಾರದ ಆದೇಶಗಳಲ್ಲಿ ಕಾಡು ಪ್ರಾಣಿಗಳ ಹಾವಳಿಯಿಂದ ಬೆಳೆನಾಶ, ಮಾನವ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಸಾಕು ಪ್ರಾಣಿಗಳ ಪ್ರಾಣಹಾನಿ, ಆಸ್ತಿಪಾಸ್ತಿ ಹಾನಿ ಹಾಗೂ ಗಾಯಗೊಂಡವರಿಗೆ ನೀಡಲಾಗುತ್ತಿರುವ ಪರಿಹಾರದ ಪ್ರಕರಣಗಳಿಗೆ ಸಂಬಂಧಿಸಿದಂತೆ ಪಾವತಿಸುತ್ತಿರುವ ದಯಾತ್ಮಕ ಧನವನ್ನು ಕಾಲಕಾಲಕ್ಕೆ ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (5) ರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರವರ ಪ್ರಸ್ತಾವನೆಯಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು 2022-23ನೇ ಸಾಲಿನ ಸೆಪ್ಟೆಂಬರ್ ಮಾಹೆಯಲ್ಲಿ ನಡೆದ ಅಧಿವೇಶನದಲ್ಲಿ ದಿನಾಂಕ:21/09/2022 ರಂದು ವನ್ಯಪ್ರಾಣಿ ದಾಳಿಯಿಂದ ಉಂಟಾದ ಮಾನವ-ಪ್ರಾಣ ಹಾನಿ ಪ್ರಕರಣಗಳಲ್ಲಿ ಪ್ರಸ್ತುತ ಪಾವತಿಸಲಾಗುತ್ತಿರುವ ಪರಿಹಾರ ಧನವನ್ನು ದುಪ್ಪಟ್ಟು ಮಾಡುವುದಾಗಿ ಘೋಷಿಸಿರುವುದಾಗಿ ಮತ್ತು ಅದರಂತೆ ಪರಿಹಾರ ಧನವನ್ನು ಪರಿಷ್ಕರಿಸಲು ಕೋರಿರುತ್ತಾರೆ.

...2

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಅಪಜೀ 114 ಎಫ್‌ಡಬ್ಲ್ಯೂಎಲ್ 2022,**
**ಬೆಂಗಳೂರು. ದಿನಾಂಕ:15-12-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಶಾಶ್ವತ ಅಂಗವಿಕಲತೆ, ಗಾಯಗೊಂಡವರಿಗೆ, ಆಸ್ತಿ-ಪಾಸ್ತಿ ನಷ್ಟ ಪ್ರಕರಣಗಳಲ್ಲಿ ಈ ಹಿಂದಿನ ಆದೇಶಗಳನ್ವಯ ನೀಡುತ್ತಿರುವ ಪರಿಹಾರ ಧನ ಮತ್ತು ಮಾಶಾಸನ ಧನವನ್ನು ಪರಿಷ್ಕರಿಸಿ ಈ ಕೆಳಕಂಡಂತೆ ನಿಗಧಿಪಡಿಸಿ ಆದೇಶಿಸಲಾಗಿದೆ.

| ಕ್ರ.ಸಂ | ಪ್ರಕರಣಗಳ ವಿವರ | ಪ್ರಸ್ತುತ ನೀಡಲಾಗುತ್ತಿರುವ ದಯಾತ್ಮಕ ಧನ | ನಿಗಧಿಪಡಿಸಲಾದ ದಯಾತ್ಮಕ ಧನ |
|---|---|---|---|
| 1 | ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳು | ರೂ.7.50 ಲಕ್ಷ (ಏಳು ಲಕ್ಷ ಐವತ್ತು ಸಾವಿರಗಳು ರೂಪಾಯಿ) | ರೂ.15.00 ಲಕ್ಷ (ಹದಿನೈದು ಲಕ್ಷ ರೂಪಾಯಿ) |
| 2 | ಕಾಡುಪ್ರಾಣಿಯಿಂದ ಉಂಟಾಗುವ ಶಾಶ್ವತ ಅಂಗವಿಕಲತೆ ಪ್ರಕರಣಗಳು | ರೂ.5.00 ಲಕ್ಷ (ಐದು ಲಕ್ಷ ರೂಪಾಯಿ) | ರೂ.10.00 ಲಕ್ಷ (ಹತ್ತು ಲಕ್ಷ ರೂಪಾಯಿ) |
| 3 | ಕಾಡುಪ್ರಾಣಿಯಿಂದ ಉಂಟಾಗುವ ಭಾಗಶಃ ಶಾಶ್ವತ ಅಂಗವಿಕಲತೆ ಪ್ರಕರಣಗಳು | ರೂ.2.50 ಲಕ್ಷ (ಎರಡು ಲಕ್ಷ ಐವತ್ತು ಸಾವಿರ ರೂಪಾಯಿ) | ರೂ.5.00ಲಕ್ಷ (ಐದು ಲಕ್ಷ ರೂಪಾಯಿ) |
| 4 | ಕಾಡುಪ್ರಾಣಿಗಳಿಂದ ಗಾಯಗೊಂಡ ಪ್ರತಿ ವ್ಯಕ್ತಿಗೆ ಗರಿಷ್ಟ ಮೊತ್ತ ಪ್ರಕರಣಗಳು | ರೂ30,000/- (ಮೂವತ್ತು ಸಾವಿರ ರೂಪಾಯಿ) | ರೂ.60,000/- (ಅರವತ್ತು ಸಾವಿರ ರೂಪಾಯಿ) |
| 5 | ಕಾಡಾನೆ ದಾಳಿಯಿಂದ ಉಂಟಾದ ಆಸ್ತಿ ನಷ್ಟ ಪ್ರತಿ ಪ್ರಕರಣಕ್ಕೆ | ರೂ. 10,000/- (ಹತ್ತು ಸಾವಿರ ರೂಪಾಯಿ) | ರೂ.20,000/- (ಇಪತ್ತು ಸಾವಿರ ರೂಪಾಯಿ) |
| 6 | **ಮಾಸಾಶನ**: ವನ್ಯಪ್ರಾಣಿಗಳ ದಾಳಿ / ಹಾವಳಿಯಿಂದ ಉಂಟಾಗುವ ಮಾನವ-ಪ್ರಾಣ ಹಾನಿ ಪ್ರಕರಣಗಳಲ್ಲಿ ಮೃತಪಟ್ಟ ವ್ಯಕ್ತಿಗಳ ಕುಟುಂಬಕ್ಕೆ ಹಾಗೂ ಶಾಶ್ವತ ಅಂಗವಿಕಲತೆಗೊಳಗಾದ ವ್ಯಕ್ತಿಗಳಿಗೆ ನೀಡುತ್ತಿರುವ ಧಯಾತ್ಮಕ ಧನದ ಜೊತೆಗೆ ಪ್ರತೀ ತಿಂಗಳಂತೆ 5 ವರ್ಷಗಳ ವರೆಗೆ ಮಾಸಾಶನ | ರೂ.2000/- (ಎರಡು ಸಾವಿರ ರೂಪಾಯಿ) | ರೂ.4,000/- (ಐದು ಸಾವಿರ ರೂಪಾಯಿ) |

ಈ ದಯಾತ್ಮಕ ಧನ ಪಾವತಿಗೆ ಸಂಬಂಧಿಸಿದಂತೆ ಈಗಾಗಲೇ ಮೇಲೆ ಓದಲಾಗಿರುವ ಸರ್ಕಾರಿ ಆದೇಶಗಳಲ್ಲಿ ನಿರ್ದಿಷ್ಟಪಡಿಸಿರುವ ಷರತ್ತು ಮತ್ತು ನಿಬಂಧನೆಗಳು ಯಾವುದೇ ಬದಲಾವಣೆ ಇಲ್ಲದೆ ಮುಂದುವರೆಯುತ್ತವೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 696 ವೆಚ್ಚ-5/2022, ದಿನಾಂಕ:14/12/2022ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಶಂಕರ ಎಸ್)** 15/12/22
ಸರ್ಕಾರದ ಜಂಟಿ ಕಾರ್ಯದರ್ಶಿ-2
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
15/12/22

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಈ ಆದೇಶದ 500 ಪ್ರತಿಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003 ಇವರಿಗೆ ಹಾಗೂ 250 ಪ್ರತಿಗಳನ್ನು ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, #432, 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇಲ್ಲಿಗೆ ಒದಗಿಸುವಂತೆ ಕೋರಿದೆ.

**ಪ್ರತಿಗಳು:**

1. ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ / ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು 560003.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು 560003.
4. ಎಲ್ಲಾ ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಅರಣ್ಯ ಸಂರಕ್ಷಣಾಧಿಕಾರಿಗಳು / ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ / ವನ್ಯಜೀವಿ) / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ಇವರ ಮುಖಾಂತರ)
5. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನಸೌಧ, ಬೆಂಗಳೂರು.
7. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರ

ಇ-ಸಂಖ್ಯೆ: ಅಪಜೀ 114 ಎಫ್ ಡಬ್ಲ್ಯೂಎಲ್ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:16-12-2022.

## ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ:ಅಪಜೀ 114 ಎಫ್‌ಡಬ್ಲ್ಯೂಎಲ್ 2022, ದಿನಾಂಕ:15-12-2022ರ ಆದೇಶ ಭಾಗದ ಕೋಷ್ಟಕದಲ್ಲಿನ ಕ್ರಮ ಸಂಖ್ಯೆ: (6) ರಲ್ಲಿನ ಕಲಂ (4) ರಲ್ಲಿ ನಿಗಧಿಪಡಿಸಲಾದ ಮಾಸಾಶನ ರೂ. 4,000/- (ಐದು ಸಾವಿರ ರೂಪಾಯಿ) ಎಂಬುದರ ಬದಲಾಗಿ "**ರೂ. 4,000/- (ನಾಲ್ಕು ಸಾವಿರ ರೂಪಾಯಿ)**" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಶಂಕರ ಎಸ್)** 16/12/22
ಸರ್ಕಾರದ ಜಂಟಿ ಕಾರ್ಯದರ್ಶಿ-2
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
16/12/22

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಈ ಆದೇಶದ 500 ಪ್ರತಿಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003 ಇವರಿಗೆ ಹಾಗೂ 250 ಪ್ರತಿಗಳನ್ನು ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, #432, 4ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇಲ್ಲಿಗೆ ಒದಗಿಸುವಂತೆ ಕೋರಿದೆ.

**ಪ್ರತಿಗಳು:**

1. ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ / ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು 560003.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು 560003.

4. ಎಲ್ಲಾ ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಅರಣ್ಯ ಸಂರಕ್ಷಣಾಧಿಕಾರಿಗಳು / ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ / ವನ್ಯಜೀವಿ) / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ಇವರ ಮುಖಾಂತರ)
5. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನಸೌಧ, ಬೆಂಗಳೂರು.
7. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.